ಶ್ರೀ ಎಚ್. ಬಿ. ಜ್ಯಾಲನಯ್ಯ.—ಈ ವಿಶ್ವವಿದ್ಯಾನಿಲಯವನ್ನು ಕೇಂದ್ರ ವಿಶ್ವವಿದ್ಯಾನಿಲಯವಾಗಿ ಕೇಂದ್ರಸರ್ಕಾರದವರು ಮಾಡಿದರೆ ವಿಶ್ವವಿದ್ಯಾನಿಲಯದ ಅಂತಸ್ತು ಹೆಚ್ಚುತ್ತದೆ ಎಂದು ಮಾನ್ಯ ಉಪಮಂತ್ರಿಗಳು ಹೇಳಿದರು. ಅಂದರೆ ಈಗ ಇರುವಂತಹ ಅಂತಸ್ತು ಕಡಿಮೆಯಾಗಿದೆ, ವಿಶ್ವವಿದ್ಯಾನಿಲಯದ ಮಟ್ಟ ಕೆಳಗೆ ಹೋಗಿದೆ ಎಂದು ಅರ್ಥವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಆ ರೀತಿ ಹೇಳಲಿಲ್ಲ. ಕೇಂದ್ರ ಸರ್ಕಾರದವರು ವಹಿಸಿಕೊಂಡರೆ ಈ ವಿಶ್ವವಿದ್ಯಾನಿಲಯ ಅಖಿಲಭಾರತದ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ವಿಶ್ವವಿದ್ಯಾನಿಲಯದ ಹೊಸ ಕ್ಯಾಂಪಸ್‌ಗೆ 15 ಕೋಟಿ ರೂಪಾಯಿಗಳ ಖರ್ಚು ಆಗುತ್ತದೆ ಎಂದು ಹೇಳಿದಿರಿ. ಈ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆಂದು ತಿಳಿದುಕೊಂಡು ಹೊಸ ಕ್ಯಾಂಪಸ್‌ನಲ್ಲಿ ಫೌಂಡೇಷನ್ ಹಾಕಿಸಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಉದ್ದೇಶದಿಂದ ಫೌಂಡೇಷನ್ ಹಾಕಿಸಿಲ್ಲ. ಈಗಾಗಲೇ ಹೊಸ ಕ್ಯಾಂಪಸ್‌ನಲ್ಲಿ ಕೆಲಸ ನಡೆದಿದೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರಸರ್ಕಾರ ವಹಿಸಿಕೊಂಡರೆ ಈ ವಿಶ್ವವಿದ್ಯಾನಿಲಯವನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸುವುದಕ್ಕೆ ಅವಕಾಶವಾಗುತ್ತದೆಂಬ ಅಭಿಪ್ರಾಯ ಇದೆ.

Appointment of Assistant Public Prosecutors in Gulbarga Division

70. Sri SADASHIVAPPA PATIL (Deodurg).—

Will the Chief Minister be pleased to state :—

(*a*) the number of Sub-Inspectors of Police who are working as Assistant Police Prosecutors in Munsiff Court in Gulbarga Division ;

(*b*) the reasons for not appointing the Assistant Public Prosecutors?

Sri VEERENDRA PATIL (Chief Minister).—

(*a*) Four Police Sub Inspectors are working as Assistant Public Prosecutors in Munsiff Courts in Gulbarga Division.

(*b*) The Assistant Public Prosecutors are to be appointed by direct recruitment through the Public Service Commission as per the Mysore Assistant Public Prosecutors Service (Recruitment) Rules, 1967. While the 4 posts mentioned in reply to clause (*a*) have been notified to the Public Service Commission, action in the meanwhile, has also been initiated to fill up these posts temporarily pending recruitment through the Public Service Commission, from Members of the Bar possessing prescribed qualifications.

ಶ್ರೀ ಸದಾಶಿವಪ್ಪ ಪಾಟೀಲ್.—ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಅವರುಗಳನ್ನು ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಬೇಕಾಗುತ್ತದೆಂದು ತಿಳಿಸಿದ್ದೀರಿ. ಈಗ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಖಾಲಿ ಇರುವ ನಾಲ್ಕು ಜಾಗಗಳನ್ನು ಪಿ. ಎಸ್. ಸಿ. ಮೂಲಕ ನೇಮಕ ಮಾಡಧಿರುವುದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರ ಪಾಟೀಲ್.—ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಇವರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಡಿವಿಜನಲ್ ಕಮಿಷನರ್ ಅವರಿಗೆ ಅಧಿಕಾರ ಇದೆ. ಪಿ. ಎಸ್. ಸಿ. ಮೂಲಕ ನೇಮಕವಾಗುವುದು ತಡವಾದರೆ ಡಿವಿಜನಲ್ ಕಮಿಷನರ್ ಅವರು ತಾತ್ಕಾಲಿಕವಾಗಿ ನೇಮಕ ಮಾಡುತ್ತಾರೆ. ಪಿ. ಎಸ್. ಸಿ. ಅವರು ನೇಮಕ ಮಾಡಿದ ಮೇಲೆ ಆ ಜಾಗಗಳು ಪರ್‌ಮನೆಂಟ್ ಆಗುತ್ತವೆ.

†Indicates that the remarks or speeches have not been revised by the member concerned.

ಶ್ರೀ ಸದಾಶಿವಪ್ಪ ಪಾಟೀಲ್.—ತಮಗೆ ಗೊತ್ತಿರುವಂತೆ ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳು ಲಾ-ಗ್ರ್ಯಾಜುಯೇಟ್ ಆಗಿರುವುದಿಲ್ಲ. ಆದ್ದರಿಂದ ಇಂತಹವರನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನಾಗಿ ನೇಮಕ ಮಾಡಿದರೆ ಅವರುಗಳಿಂದ ಕಂಪ್ಲೈಂಟ್‌ಗಳ ಬಗ್ಗೆ ಯಾವ ರೀತಿ ನ್ಯಾಯ ಸಿಗುತ್ತದೆ ಎಂಬುದನ್ನು ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ತಿಳಿದುಕೊಂಡೇ ಈಗ ಲಾ-ಗ್ರ್ಯಾಜುಯೇಟ್‌ಗಳನ್ನು ಈ ಜಾಗಕ್ಕೆ ನೇಮಕ ಮಾಡಬೇಕೆಂದು ನಿರ್ಣಯ ಮಾಡಿ ರೂಲ್ಸನ್ನು ಜಾರಿಗೆ ತರಲಾಗಿದೆ. ಈಗ ಗುಲ್ಬರ್ಗ ವಿಭಾಗದಲ್ಲಿ ನಾಲ್ಕು ಜನ ಸಬ್ ಇನ್ಸ್‌ಪೆಕ್ಟರುಗಳು ಸರ್ಕಾರೀ ಪರ ಸಹಾಯಕ ವಕೀಲರು ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈಗಾಗಲೇ ಡಿವಿಜನಲ್ ಕಮಿಷನರ್ ಅವರು ಪಿ. ಎಸ್. ಸಿ. ಅವರಿಗೆ ಲಾ ಗ್ರ್ಯಾಜುಯೇಟ್‌ಗಳನ್ನು ಈ ಜಾಗಗಳಿಗೆ ನೇಮಕ ಮಾಡಬೇಕೆಂದು ಬರೆದಿದ್ದಾರೆ. ಆದಕಾರಣ ಇಷ್ಟರಲ್ಲಿಯೇ ಆ ಜಾಗಗಳಿಗೆ ಲಾ ಗ್ರ್ಯಾಜುಯೇಟ್‌ಗಳು ಬರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ನಾಗಪ್ಪ.—ಇದರಲ್ಲಿ ಹೇಳಿರುವ ನಾಲ್ಕು ಜನ ಪ್ರಾಸಿಕ್ಯೂಟರುಗಳು ಯಾವ ಯಾವ ಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ? ಮತ್ತು ಕೆಲವು ಕಡೆ ಈಚೆಗೆ ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ರೂಲ್ಸು ಪ್ರಕಾರ ನೇಮಿಸಲಾಗಿದೆ. ಇವರೆಲ್ಲರೂ ಪರ್ಮನೆಂಟಾಗಿ ನೇಮಕ ವಾದವರು ಎಂದು ಭಾವಿಸುತ್ತೀರಾ ಹೇಗೆ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಹೇಳಿದೆ: ರೂಲ್ಸು ಪ್ರಕಾರ ಪಬ್ಲಿಕ್ ಸರ್ವಿನ್ಸು ಕಮಿಷನ್ನಿನವರು ರೆಕ್ರುಟುಮಾಡಬೇಕೆಂದು ಹೇಳಲಾಗಿದೆ. ಕಾನೂನು ಪ್ರಕಾರ ಪಬ್ಲಿಕ್ ಸರ್ವಿನ್ಸು ಕಮಿಷನ್ನಿನವರು ಮಾಡಬೇಕೆಂದು ನೋಟಿಫಿಕೇಷನ್ ಕೂಡ ಆಗಿದೆ. ಇದರಲ್ಲಿ ಹೇಳಿರುವ ನಾಲ್ಕು ಜನ ಪೋಲೀಸು ಸಬ್ ಇನ್ಸ್‌ಪೆಕ್ಟರುಗಳಲ್ಲಿ ಮೂರು ಜನ ಗುಲ್ಬರ್ಗಾದಲ್ಲೇ ಇದ್ದಾರೆ. ಇನ್ನೊಬ್ಬರು ಸಬ್ ಇನ್ಸ್‌ಪೆಕ್ಟರವರು ಬೀದರ್ ಭಾಗದಲ್ಲಿ ಪ್ರಾಸಿಕ್ಯೂಟರಾಗಿ ಕೆಲಸಮಾಡುತ್ತಿದ್ದಾರೆ. ಈ ನಾಲ್ಕು ಜನರನ್ನು ಬಿಟ್ಟು ಬೇರೆ ಯಾರನ್ನೂ ನೇಮಕ ಮಾಡಿಲ್ಲ. ಇನ್ನು ಮುಂದೆ ಲಾ ಗ್ರ್ಯಾಜು ಯೇಟಗಳನ್ನೇ ಅಸಿಸ್ಟೆಂಟು ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನಾಗಿ ನೇಮಕ ಮಾಡಬೇಕೆಂದು ಹೇಳಿ ಅಂತಹವರನ್ನು ಕೆಲವು ಕಡೆ ನೇಮಿಸಲಾಗಿದೆ. ಅವರುಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ.

Sri V. N. PATIL.—May I know since how long these four Inspectors have been working as Assistant Public Prosecutors and whether they were given any training to act as Assistant Public Prosecutors to conduct the cases properly ?

Sri VEERENDRA PATIL.—I do not know since how long they are working. But these are the only four Inspectors who are working as Assistant Public Prosecutors. I have already said Sir, it is not at all the policy of the Government to continue to appoint Police Inspectors as Assistant Public Prosecutors. I also said that the Divisional Commissioner has already written to the Public Service Commission and I do hope Sir, that within a short time they will appoint law graduates to these posts.

Mr. SPEAKER.—Next question by hon. Member Sri C. K. Rajaiah Shetty. The hon. Member is absent. Next question by hon. Member Sri B. B. Sayanak.

Sri M. NAGAPPA.—Sir, I have been authorised to put Question No. 23 by hon. member Sri C. K. Rajaiah Shetty.

Mr. SPEAKER.—I shall call upon the hon. Member to put the question after the question of hon. Member Sri Sayanak.